**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ವಿರಾಜಪೇಟೆ**
**ಓಎಸ್.ನಂ.೧೦೮/೨೦೧೨**

ದಿನಾಂಕಃ ೧೨-೦೧-೨೦೧೬ ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಸಿ ಕೆ ಪಿ ವಕೀಲರಿಂದ, ವಾದಿಯ ಪರವಾಗಿಃ-**

ನನಗೆ ವಾದಿಯ ಪರಿಚಯವಿದೆ. ಆತ ನಮ್ಮ ದೊಡ್ಡಪ್ಪನ ಮಗ. ನಾನು ನಲ್ಲೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ವಾದಿ ನಮ್ಮೂರಿನಲ್ಲಿ ವಾಸವಾಗಿಲ್ಲ. ಆತನಿಗೆ ನಲ್ಲೂರಿನಲ್ಲಿ ಆಸ್ತಿ ಇಲ್ಲ, ಬೆಳ್ಳೂರಿನಲ್ಲಿದೆ. ನಲ್ಲೂರು ಮತ್ತು ಬೆಳ್ಳೂರು ಅಕ್ಕಪಕ್ಕದ ಗ್ರಾಮಗಳು ಎಂದರೆ ಸರಿ. ವಾದಿಗೆ ಪೊನ್ನಂಪೇಟೆಯಲ್ಲಿ ಮನೆ ಇದೆ. ನನಗೆ ನಲ್ಲೂರು ಗ್ರಾಮದಲ್ಲಿ ಸರ್ವೆ ನಂ.೧೫೩/೮ ಮತ್ತು ೧೫೩/೧ರಲ್ಲಿ ಕಾಫಿ ತೋಟ ಇದೆ. ನನಗೂ ಮತ್ತು ವಾದಿಗೂ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ನಿಶಾನೆ ಪಿ-೧ ನನ್ನ ಚೆಕ್ಕು ಎಂದರೆ ಸರಿ. ನಿಶಾನೆ ಪಿ-೧(ಎ) ನನ್ನ ಸಹಿ ಎಂದರೆ ಸರಿ. ದಿನಾಂಕಃ ೨೭-೧೨-೨೦೧೦ರಲ್ಲಿ ವಾದಿಯಿಂದ ೨೩ ಲಕ್ಷ ರೂಪಾಯಿಗಳನ್ನು ಕೈಸಾಲವಾಗಿ ಪಡೆದುಕೊಂಡು ಬಾಬ್ತು ನಿಶಾನೆ ಪಿ-೧ನ್ನು ದಿನಾಂಕ ೨೭-೮-೨೦೧೧ರಂದು ವಾದಿಯ ಪರವಾಗಿ ನೀಡಿದ್ದೆನು ಎಂದರೆ ಸರಿಯಲ್ಲ. ದಿನಾಂಕಃ ೨೭-೮-೨೦೧೧ರಂದು ವಾದಿಯು ನಿಶಾನೆ ಪಿ-೧ನ್ನು ಬ್ಯಾಂಕಿಗೆ ನಗಧೀಕರಿಸಲು ಹಾಕಿದಾಗ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎನ್ನುವ ಹಿಂಬರಹದೊಂದಿಗೆ ಸದರಿ ಚೆಕ್ಕು ಅಮಾನ್ಯಗೊಂಡಿತು ಎಂದರೆ ಸರಿಯಲ್ಲ. ದಿನಾಂಕ ೧೦-೫-೨೦೧೧ರಂದು ವಾದಿಯು ಕಾನೂನು ನೋಟೀಸನ್ನು ನಿಶಾನೆ ಪಿ-೫ರಂತೆ ನೀಡಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾನು ಪ್ರತ್ಯುತ್ತರವನ್ನು ನೀಡಿಲ್ಲ. ನಿಶಾನೆ ಪಿ-೧ನ್ನು ತಡೆಹಿಡಿಯಬೇಕೆಂದು ನಾನೇನು ಬ್ಯಾಂಕಿಗೆ ನೋಟೀಸನ್ನು ಕೊಟ್ಟಿಲ್ಲ. ನಿಶಾನೆ ಪಿ-೧ ಚೆಕ್ಕನ್ನು ವಾದಿಯು ದುರುಪಯೋಗಪಡಿಸಿಕೊಳ್ಳುತ್ತಾನೆಂದು ನಾನೇನು ಪೋಲೀಸರಿಗೆ ದೂರು ನೀಡಿಲ್ಲ. ನಾನು ವಾದಿಯಿಂದ ೨೩ ಲಕ್ಷ ರೂಪಾಯಿಗಳನ್ನು ಕೈಸಾಲವಾಗಿ ಪಡೆದುಕೊಂಡಿದ್ದರಿಂದಲೇ ನಾನು ಪೋಲೀಸರಿಗಾಗಲಿ ಇಲ್ಲವೇ ಬ್ಯಾಂಕಿನವರಿಗಾಗಲಿ ದೂರನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ.

ವಾದಿಯು ನನ್ನ ವಿರುದ್ಧ ಪೊನ್ನಂಪೇಟೆ ಕಿರಿಯ ಸಿವಿಲ್ ನ್ಯಾಯಾಲಯದಲ್ಲಿ ಚೆಕ್ಕು ಅಮಾನ್ಯಗೊಂಡ ಬಗ್ಗೆ ಒಂದು ಖಾಸಗಿ ದೂರು ಸಿಸಿ.ನಂ.೧೦೦೦/೨೦೧೧ನ್ನು ದಾಖಲಿಸಿದ್ದಾರೆ ಎಂದರೆ ಸರಿ. ಅದು ಇನ್ನೂ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಬ್ಯಾಂಕಿನವರು ಸಹ ನನ್ನ ಮೇಲೆ ಸಾಲ ಪಡೆದುಕೊಂಡ ಬಗ್ಗೆ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ದಾಖಲಿಸಿದ್ದರು ಎಂದರೆ ಸರಿ. ಅವೆಲ್ಲವೂ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಗೊಂಡಿವೆ. ಬ್ಯಾಂಕಿನ ಸಾಲವನ್ನು ಮರುಪಾವತಿಸುವ

ಸಲುವಾಗಿ ನಾನು ವಾದಿಯಿಂದ ದಿನಾಂಕ ೨೬-೧೨-೨೦೧೦ರಲ್ಲಿ ೨೩ ಲಕ್ಷ ರೂಪಾಯಿಗಳನ್ನು ಕೈಸಾಲವಾಗಿ ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ಅದೇ ದಿನ ನಾನು ಪೊನ್ನಂಪೇಟೆಯ ಕೆನೆರಾ ಬ್ಯಾಂಕಿನ ಚೆಕ್ ನಂ. ೨೪೬೬೬೬, ದಿಃ ೨೬-೪-೨೦೧೧ರಂದು ನಗದೀಕರಣಕ್ಕೆ ನೀಡಿದ್ದೆನು ಎಂದರೆ ಸರಿಯಲ್ಲ.   ನಾನು ಕಾಫಿ ಪ್ಲಾಂಟರ್ ಆಗಿದ್ದೇನೆ. ನಿಶಾನೆ ಡಿ-೧ ಶಿಕ್ಷಣ ಸಂಸ್ಥೆಯ ಟ್ರಸ್ಟ್ ಆಗಿದೆ ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ಸದರಿ ಶಿಕ್ಷಣ ಸಂಸ್ಥೆ ನಡೆಸುತ್ತೇವೆ. ಶಿಕ್ಷಣ ಸಂಸ್ಥೆಗೆ ೬ ಜನರ ಟ್ರಸ್ಟ್ ಅಗತ್ಯ ಇರುವುದರಿಂದ ನನ್ನ ಪರಿಚಯದ ಐದು ಜನರನ್ನು ಸದರಿ ಟ್ರಸ್ಟ್‌ನ ಸದಸ್ಯರನ್ನಾಗಿ ಮಾಡಿಕೊಂಡಿದ್ದೆನು. ಸದರಿ ಟ್ರಸ್ಟನ್ನು ನಾವು ನೋಂದಾಯಿಸಿದ್ದೇವೆ. ಸದರಿ ಟ್ರಸ್ಟನ್ನು ನೋಂದಾಯಿಸುವ ಮೊದಲು ನಾವೇನು ಗೊತ್ತುವಳಿಯನ್ನು ಪಾಸ್ ಮಾಡಿಲ್ಲ. ವಾದಿಯ ಹೆಂಡತಿಯು ಸಹಿತ ನಮ್ಮ ಟ್ರಸ್ಟ್‌ನಲ್ಲಿ ಒಬ್ಬ ಸದಸ್ಯೆ ಆಗಿದ್ದಾಳೆ. ಆಕೆ ಮತ್ತು ಉಳಿದ ಸದಸ್ಯರು ಯಾವುದೇ ಹಣವನ್ನು ಹಾಕಿಲ್ಲ. ನಾವು ಸಾಲವನ್ನು ಪಡೆದುಕೊಳ್ಳುವುದಕ್ಕಾಗಿ ಬೇನಾಮಿ ಟ್ರಸ್ಟನ್ನು ನೋಂದಾಯಿಸಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಲೆಕ್ಕಪತ್ರವನ್ನು ಇಟ್ಟಿಲ್ಲ. ಕೇವಲ ವಿದ್ಯಾ ಸಂಸ್ಥೆಯನ್ನು ಆರಂಭಿಸಲು ಪರವಾನಗಿಯನ್ನು ಪಡೆಯುವುದಕ್ಕೋಸ್ಕರ ಸದರಿ ಟ್ರಸ್ಟನ್ನು ಮಾಡಿದ್ದೆವು. ಟ್ರಸ್ಟ್‌ನ ಮೂಲ ಬಂಡವಾಳವನ್ನು ನಾವು ಯಾರು ಹಾಕಿಲ್ಲ. ನನ್ನ ಖಾತೆಯು ಪೊನ್ನಂಪೇಟೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಮತ್ತು ಕೆನೆರಾ ಬ್ಯಾಂಕಿನಲ್ಲಿ, ಗೋಣಿಕೊಪ್ಪದ ಕೆನೆರಾ ಬ್ಯಾಂಕಿನಲ್ಲಿ ಮತ್ತು ವಿರಾಜಪೇಟೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಇರುತ್ತದೆ. ನನ್ನ ಮುಖ್ಯ ವಿಚಾರಣೆಯ ಶಪಥಪತ್ರದಲ್ಲಿ ನನಗೂ ಮತ್ತು ವಾದಿಗೂ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದು ಬರೆದಿದ್ದೇನೆ. ನಾನು ಸಲ್ಲಿಸಿದ ಪ್ರಮಾಣಪತ್ರದ ಖಂಡಿಕೆ ೧೪ರ ೬ನೇ ಸಾಲಿನಲ್ಲಿ '೨೦೦೪ರಲ್ಲಿ ನಾನು ಲಾಂಚ್ ಪ್ಯಾಡ್ ಶಾಲೆಯನ್ನು ಪ್ರಾರಂಭಿಸಲು ನನಗೆ ಹಣಕಾಸಿನ ಅವಶ್ಯಕತೆ ಇದ್ದು ವಾದಿಯ ಹೆಂಡತಿಯವರ ಕೈಯಿಂದ ೧೦ ಲಕ್ಷ ರೂಪಾಯಿಗಳನ್ನು ಪಡೆದುಕೊಳ್ಳಲು ನಾನು ಸಹಿ ಮಾಡಿದ ಖಾಲಿ ಚೆಕ್ಕನ್ನು ಭದ್ರತೆಗಾಗಿ ಕೊಟ್ಟಿದ್ದೆನು' ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ವಾದಿಗೂ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ. ನಿಶಾನೆ ಪಿ-೧ ಚೆಕ್ಕನ್ನು ನಾನು ವಾದಿಯ ಹೆಂಡತಿಗೆ ಕೊಟ್ಟಿದ್ದೇನೆ ಎಂದು ಹೇಳುವ ಬಗ್ಗೆ ವಾದಿಯ ವಕೀಲರು ಕೊಟ್ಟ ನೋಟೀಸಿಗೆ ನಾನು ಪ್ರತ್ಯುತ್ತರದಲ್ಲಿ ಹೇಳಿಲ್ಲ ಎಂದರೆ ನಾನು ಪ್ರತ್ಯುತ್ತರವನ್ನೇ ಕೊಟ್ಟಿಲ್ಲ. ಲಾಂಚ್ ಪ್ಯಾಡ್ ಶಾಲೆ ಈಗಲೂ ನಡೆಯುತ್ತಿದೆ. ಈಗಲೂ ಸಹ ವಾದಿಯ ಹೆಂಡತಿ ಸುನಿತಾ ಬಿದ್ದಪ್ಪ ನಮ್ಮ ಟ್ರಸ್ಟ್‌ನ ಸದಸ್ಯೆಯಾಗಿದ್ದಾಳೆ. ನಾನೇನು ಆಕೆಯನ್ನು ಟ್ರಸ್ಟ್‌ನಿಂದ ಕೈಬಿಡುವ ಪ್ರಯತ್ನವನ್ನು ಮಾಡಿಲ್ಲ. ಏಕೆಂದರೆ ಸದರಿ ಟ್ರಸ್ಟನ್ನು ಕೇವಲ ಶಾಲೆಯನ್ನು ನೋಂದಾಯಿಸುವ ಸಲುವಾಗಿ ಔಪಚಾರಿಕವಾಗಿ ಮಾಡಿದ್ದು ಅಷ್ಟೆ. ನಿಶಾನೆ ಡಿ-೬ ವಾದಿಯರ

ಆಕ್ಷೇಪಣೆಗೊಳಪಟ್ಟು ನಿಶಾನಿಸಲಾಗಿದೆ ಎಂದರೆ ಸರಿ. ನಿಶಾನೆ ಡಿ-೬ನ್ನು ವಾದಿಯ ಹೆಂಡತಿ-ಸುನಿತಾ ಬಿದ್ದಪ್ಪ ನನಗೆ ೨೦೦೪ರಲ್ಲಿ ಬರೆದುಕೊಟ್ಟಿದ್ದಾರೆ. ನಿಶಾನೆ ಡಿ-೬ರಲ್ಲಿ ನನ್ನ ಹೆಸರು ಇದೆ. ನನ್ನ ಹೆಸರು 'ಜಗ್ಗ' ಎಂದು ಬರೆಯಲಾಗಿದೆ. ಆದರೆ ವಾದಿಯ ಹೆಂಡತಿಯ ಹೆಸರು ಬರೆದಿಲ್ಲ. ನನ್ನ ಹೆಸರು ಜಗದೀಶ್ ಅಲಿಯಾಸ್ ಜಗ್ಗ ಎನ್ನುವ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ಹಾಜರ್ಪಡಿಸಿಲ್ಲ ಎಂದರೆ ಸರಿ. ನಿಶಾನೆ ಡಿ-೬ಕ್ಕೆ ನನ್ನ ಸಹಿಯಾಗಲಿ, ವಾದಿಯ ಹೆಂಡತಿ ಸಹಿಯಾಗಲಿ ಇಲ್ಲ ಎಂದರೆ ಸರಿ. ನಿಶಾನೆ ಡಿ-೬ ಯಾವ ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು ಎಂದು ನಮೂದಾಗಿಲ್ಲ ಎಂದರೆ ಸರಿ. ಸುನೀತಾ ಬಿದ್ದಪ್ಪರವರ ಬಳಿ ನಾನು ಸಹಿ ಮಾಡಿದ ನಾಲ್ಕು ಚೆಕ್ಕುಗಳು ಇದ್ದು ಅವುಗಳನ್ನು ವಾಪಸ್ಸು ಕೊಡಬೇಕೆಂದು ನಾನೇನು ಕಾನೂನು ನೋಟೀಸನ್ನು ಕೊಟ್ಟಿಲ್ಲ. ಸದರಿ ನಾಲ್ಕು ಚೆಕ್ಕುಗಳು ಪೊನ್ನಂಪೇಟೆಯ ಕೆನೆರಾ ಬ್ಯಾಂಕಿಗೆ ಸೇರಿವೆ. ಸದರಿ ಚೆಕ್ ನಂಬರ್‌ಗಳು ನನಗೆ ನೆನಪಿಲ್ಲ. ನಾನು ಬಿಎಸ್‌ಸಿ (ಕೃಷಿ) ಪದವಿ ಪಡೆದಿದ್ದೆನು. ನನಗೆ ವ್ಯವಹಾರ ಜ್ಞಾನ ಇದೆ. ನನಗೆ ಖಾಲಿ ಚೆಕ್‌ಗೆ ಸಹಿ ಮಾಡಿಕೊಡುವ ಸಂದರ್ಭ ಇತ್ತು. ನಾನು ಬಡ್ಡಿ ಸೇರಿ ವಾದಿಗೆ ರೂ.೨೯,೨೦,೫೪೮/-ನ್ನು ಕೊಡುವ ಹೊಣೆಗಾರಿಕೆಯುನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ. ಈ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಸಲುವಾಗಿ ನಿಶಾನೆ ಡಿ-೬ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-೬ಕ್ಕೂ ಚೆಕ್ಕಿನ ಮೊತ್ತಕ್ಕೂ ಯಾವುದೇ ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-೬ರಲ್ಲಿ ಕೆನೆರ್ರಾ ಬ್ಯಾಂಕಿನ ಚೆಕ್ ನಂ.೨೪೬೬೬೬ನ್ನು ನಮೂದಿಸಿಲ್ಲ ಎಂದರೆ ಸರಿ. ನಿಶಾನೆ ಪಿ-೧ ನನ್ನ ಉಳಿತಾಯ ಖಾತೆಗೆ ಸಂಬಂಧಪಟ್ಟಿದೆ.  ಆದರೆ ನನಗೆ ಈಗ ಖಾತೆ ನಂಬರ್ ನೆನಪಿಲ್ಲ. ಖಾತೆ ನಂಬರನ್ನು ಸಹಿತ ನಿಶಾನೆ ಡಿ-೬ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ವಾದಿಗೆ ಕೊಡಬೇಕಾದ ಹಣವನ್ನು ತಪ್ಪಿಸುವ ಸಲುವಾಗಿ ನಾನು ನಿಶಾನೆ ಡಿ-೧ ಮತ್ತು ೬ನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆಯನ್ನು ಪಾವತಿಸುತ್ತೇನೆ. ನಿಶಾನೆ ಡಿ-೬ರಲ್ಲಿ ಸುಳ್ಳು ಲೆಕ್ಕ ಪತ್ರವನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-೧ ಮತ್ತು ೬ ಈ ಕೇಸಿಗೆ ಸಂಬಂಧಪಟ್ಟ ದಾಖಲೆಗಳೇ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ,

**ಸಹಿಃ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರದನ್ಯಾದಂಃ ವಿರಾಜಪೇಟೆ.**

**ಸಾಕ್ಷಿದಾರರ ಸಹಿಃ**

ದಿನಾಂಕಃ <u>೧೨-೦೧-೨೦೧೬</u> ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ-</u>

ಪ್ರತಿವಾದಿ ೧ ಮತ್ತು ೨ ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ ಅವರ ಪರವಾಗಿ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ,

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರದನ್ಯಾದಂಃ ವಿರಾಜಪೇಟೆ.**